ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಮತ್ತು ಕರ್ನಾಟಕ ಕೃಷಿ ಇಲಾಖೆ

ಸಮಗ್ರ ಕೃಷಿ ಹವಾಮಾನ ವಿಭಾಗ

ಕೃಷಿ ಹವಾಮಾನ ವಿಭಾಗ, ಜಿ.ಕೆ.ವಿ.ಕೆ, ಬೆಂಗಳೂರು–೬೫

ತುರುವೇಕೆರೆ ಹೋಬಳಿಯ ಕೃಷಿ ಹವಾಮಾನ ಮುನ್ಸೂಚನೆ

ದಿನಾಂಕ: **18.03.2014**

ಈ ವಾರದ ಮುನ್ಸೂಚನೆ (ದಿನಾಂಕ **19-03-14 to 23.03.14** ವರೆಗೆ)

ನಿಯತಾಂಕಗಳು	19.03.14	20.03.14	21.03.14	22.03.14	23.03.14
ಮಳೆ (ಮಿ ಮಿ)	0	0	0	0	0
ಗರಿಷ್ಠ ಉಷ್ಣಾಂಶ(ಡಿ.ಸೆ.)	34	35	35	34	35
ಕನಿಷ್ಠ ಉಷ್ಣಾಂಶ (ಡಿ.ಸೆ.)	19	19	20	21	21
ಮೋಡ (ಪ್ರಮಾಣ)	4	6	5	3	3
ಅರ್ದ್ರತೆ ೭.೨೦ ಬೆ (ಶೇ)	63	64	62	61	65
ಅರ್ದ್ರತೆ ೨.೨೦ ಮ (ಶೇ)	33	35	32	33	34
ಗಾಳಿಯ ವೇಗ (ಕಿ.ಮಿ/ಗಂಟೆಗೆ)	5	5	6	6	6
ಗಾಳಿಯ ದಿಕ್ಕು (ಡಿಗ್ರಿ)	150	160	140	120	140

ಈ ವಾರದ ಮುನ್ಸೂಚನೆಯ ಪ್ರಕಾರ ಮುಂದಿನ ಐದು ದಿನಗಳ ಸಮೀಕ್ಷೆಯ ಪ್ರಕಾರ ತುಮಕೂರು ಹಾಗೂ ಸುತ್ತಮುತ್ತ ಒಣಹವೆ ಮುಂದುವರೆಯಲಿದೆ. ದಿನದ ಗರಿಷ್ಠ ಉಷ್ಣಾಂಶ **34.0-35.0°C** ಮತ್ತು ಕನಿಷ್ಠ **19.0-21.0 °C** ಇರುವ ಸಾಧ್ಯತೆ ಇದೆ. ಬೆಳಿಗಿನ ಆರ್ದ್ರತೆ ಪ್ರಮಾಣ ಶೇ **61-65 %** ಇದ್ದು, ಮಧ್ಯಾಹ್ನ **32-35 %** ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ **5-6** ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

- ದನಕರುಗಳಿಗೆ ಕಾಲುಬಾಯಿಜ್ವರ ರೋಗದ ಭೀತಿ ಇರುವುದರಿಂದ ಅಗತ್ಯ ಮುನ್ನೆಚ್ಚರಿಕೆ ಕ್ರಮವಹಿಸಿ ಲಸಿಕೆ ಹಾಕಿಸುವುದು ಅತಿ ಅವಶ್ಯಕ.

ಮಾರ್ಚ್ ತಿಂಗಳಲ್ಲಿ ಬೆಳೆಯಬಹುದಾದ ತಳಿಗಳು:

ರಾಗಿ: ಇಂಡಾಫ್ಲ್–೯, **ಅಲಸಂದೆ:** ಸಿ–152. **ಉದ್ದು:** ಕರೆಗಾಂವ್–೩, ಟಿ–9, ರಶ್ಮಿ. **ಶಕ್ತಿಮಾನ್ ಮುಸುಕಿನ ಜೋಳ:** ಸಿ.ಎಸ್.ಹೆಚ್–೫, ಸಿ.ಎಸ್.ಹೆಚ್–೯. **ಅವರೆ:** ಹೆಚ್,ಎ.–೩, ಹೆಚ್,ಎ.–೪. **ತೋಟಗಾರಿಕೆ ಬೆಳೆಗಳು:** ಬಾಳೆ, ಬೆಂಡೆ, ತಿಂಗಳ ಅವರೆ.

ತರಕಾರಿ ಬೆಳೆಗಳಲ್ಲಿ ಕಂದುಬರುವ ಬೂಜು ರೋಗ ಮತ್ತು ಆಲೂಗಡ್ಡೆ ಬೆಳೆಯಲ್ಲಿ ಕಂಡುಬರುವ ಕೊನೆ ಅಂಗಮಾರಿ ರೋಗಗಳ ನುಯಂತ್ರಣಕ್ಕೆ ರಿಡೊಮಿಲ್/**Ridomil**+ಮ್ಯಾಂಕೊಜೆಬ್ (2 ಗ್ರಾಂ/ಪ್ರತಿ ಲೀಟರ್ ನೀರಿಗೆ) ಬೆರೆಸಿ ಸಿಂಪಡಿಸುವುದು.**ಕ್ಯಾಪ್ಸಿಕಂ:** ಬೂದಿ ರೋಗಕ್ಕೆ ನೇಟಿವೋ ಅನ್ನು ಸಿಂಪಡಿಸಿ.

ತರಕಾರಿ ಬೆಳೆಗಳಲ್ಲಿ ಲೀಫ್ ಮೈನರ್ ಹುಳು ಹೆಚ್ಚಾಗಿದ್ದರೆ ಅಬಾಮೆಕ್ಟಿನ್ (3 ಮಿ.ಲೀ/ಪ್ರತಿ 10 ಲೀಟರ್ ನೀರಿಗೆ) ಬೆರೆಸಿ ಸಿಂಪಡಿಸುವುದು.

- ತೊಗರಿಯಲ್ಲಿ ಕಾಯಿ ಕೊರೆಯುವ ಹುಳು ಕಂಡುಬಂದಲ್ಲಿ ಲ್ಯಾನೇಟ್ (ಮಿಥೊಮಿಲ್) (1 ಗ್ರಾಂ ಪ್ರತಿ ಲೀ. ನೀರಿಗೆ ಬೆರೆಸಿ) ಸಿಂಪಡಿಸಲು ಸೂಚಿಸಲಾಗಿದೆ. ಇದಲ್ಲದೇ, ಫ್ಲಾಶ್ ಅಥವಾ ಎಕಾಲಕ್ಸ್ (2 ಮಿ.ಲೀ. ಪ್ರತಿ ಲೀ. ನೀರಿಗೆ ಬೆರೆಸಿ) ಸಿಂಪಡಿಸಲು ಸೂಚಿಸಲಾಗಿದೆ.
- ಬೂದಿ ರೋಗ ಹರಡಲು ಇದು ಸೂಕ್ತ ಕಾಲವಾಗಿರುವುದರಿಂದ ಸಲ್ಫೆಕ್ಸ್ (ಗಂಧಕ) ಅನ್ನು ಸಿಂಪಡಿಸಲು ಸೂಚಿಸಲಾಗಿದೆ.
- ರಸ ಹೀರುವ ಕೀಟಗಳ ನಿಯಂತ್ರಣಕ್ಕೆ 5% ಬೇವಿನ ಕಷಾಯ ಅಥವಾ **Blaze**/ಬ್ಲೇಜ್ (1.5-2ಗ್ರಾಂ/ಪ್ರತಿ ಲೀಟರ್ ನೀರಿಗೆ) ಸಿಂಪಡಿಸಿ.
- ದನಕರುಗಳಿಗೆ ಕಾಲುಬಾಯಿ ರೋಗ ಕಂಡುಬಂದಿರುವುದರಿಂದ ಮುನ್ನೆಚ್ಚರಿಕೆ ಕ್ರಮವಹಿಸಿ ಲಸಿಕೆ ಹಾಕಿಸುವುದು.

ನೋಡಲ್ ಅಧಿಕಾರಿ:
ಡಾ.ಎಮ್.ಬಿ. ರಾಜೇಗೌಡ
ಬೆಂಗಳೂರು